# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮ ಕಛೇರಿ:
ನಂ–29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು–5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821–2420850, ಫ್ಯಾಕ್ಸ್:0821–2434077
ಈ–ಮೇಲ್: seechnkodagu@cescmysore.org


ಸಂಖ್ಯೆ: ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ–127/2018–19/CYS- 79 ದಿನಾಂಕ:29.06.2018
ಲಗತ್ತು: 30

## ಸಭೆಯ ನಡಾವಳಿಗಳು

ದಿನಾಂಕ: 12.06.2018 ರಂದು ಗೋಣಿಕೊಪ್ಪ ಉಪ ವಿಭಾಗ ಕಛೇರಿಯಲ್ಲಿ ಜನ ಸಂಪರ್ಕ ಸಭೆಯನ್ನು ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾಮರಾಜನಗರ ಕೊಡಗು ರವರ ನೇತೃತ್ವದಲ್ಲಿ ನಡೆಸಲಾಯಿತು. ಗೋಣಿಕೊಪ್ಪ ಉಪ ವಿಭಾಗದ ವಿದ್ಯುತ್ ಗ್ರಾಹಕರು ವಿದ್ಯುಚ್ಛಕ್ತಿಗೆ ಸಂಬಂಧಿಸಿ ನಿವೇದಿಸಿಕೊಂಡ ದೂರುಗಳು ಮತ್ತು ಅವುಗಳ ಇತ್ಯರ್ಥಕ್ಕೆ ಕೈಗೊಂಡ ಕ್ರಮಗಳ ವಿವರಗಳು ಕೆಳಕಂಡಂತಿವೆ.

DMM(comml) 5/7/2018

### ಸಭೆಯಲ್ಲಿ ಹಾಜರಿದ್ದವರು.

1. ಶ್ರೀ. ಪ್ರತಾಪ್ ಎಂ. : ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜನಗರ ಕೊಡಗು ವೃತ್ತ.
2. ಶ್ರೀ. ಸೋಮಶೇಖರ್, : ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಮಡಿಕೇರಿ ವಿಭಾಗ
3. ಶ್ರೀ.ಮತಿ ತಾರಾ, : ಕಾರ್ಯ ನಿರ್ವಾಹಕ ಇಂಜಿನಿಯರ್(ವಿ),ಚಾಮರಾಜನಗರ ಕೊಡಗು ವೃತ್ತ.
4. ಶ್ರೀ.ಮತಿ. ಲಿಂಗರಾಜಮ್ಮ : ಉಪ–ನಿಯಂತ್ರಣಾಧಿಕಾರಿ, ಚಾಮರಾಜನಗರ ಕೊಡಗು ವೃತ್ತ.
5. ಶ್ರೀ. ಪಿ.ಎನ್. ದೇವಯ್ಯ : ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ),ಮಡಿಕೇರಿ ವಿಭಾಗ.
6. ಶ್ರೀಮತಿ. ಆಲ್ಫೋನ್ಸಾ, : ಲೆಕ್ಕಾಧಿಕಾರಿಗಳು, ಆಂತರಿಕ ಪರಿಶೋಧನೆ, ಮಡಿಕೇರಿ ವಿಭಾಗ.
7. ಶ್ರೀ.ವಿ.ಎಂ. ನಾಗರಾಜು : ಲೆಕ್ಕಾಧಿಕಾರಿಗಳು, ಮಡಿಕೇರಿ ವಿಭಾಗ.
8. ಶ್ರೀ. ಎಂ. ಅಂಕಯ್ಯ, : ಸ.ಕಾ.ನಿ.ಇಂ(ವಿ), ಗೋಣಿಕೊಪ್ಪಲು.
9. ಶ್ರೀ. ವಿ. ಪಿ. ಜಗದೀಶ್, : ಪ್ರಭಾರ ಹಿರಿಯ ಸಹಾಯಕ, ಗೋಣಿಕೊಪ್ಪಲು..
10. ಶ್ರೀ. ಎಸ್.ಆರ್.ಕೃಷ್ಣಕುಮಾರ್, : ಕಿರಿಯ ಇಂಜಿನಿಯರ್, ಗೋಣಿಕೊಪ್ಪಲು ಶಾಖೆ.

ಸಂ. 1330 ದಿ. 5/7/18 ... ಮೈಸೂರು

ದಿನಾಂಕ 12.06.2018 ರಂದು ಪಡೆದ ದೂರುಗಳ ವಿವರ

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ಸಲಹೆ/ದೂರುಗಳಿಗೆ ಉತ್ತರ |
|---|---|---|---|
| 1 | ಶ್ರೀ ಕೆ. ಎಂ. ಸುರೇಂದ್ರ, ಹುದಿಕೇರಿ ಗ್ರಾಮ. | ★ ಹೈಸೊಡ್ಲೂರು, ಕೋಣಗೇರಿ ಮತ್ತು ಬೆಳ್ಳೂರು ಗ್ರಾಮಗಳಿಗೆ ಕೇವಲ ಒಂದು ಡಿ.ಓ.ಎಲ್.ಓ. ಕಂಟ್ರೋಲ್ ಇರುತ್ತದೆ ಇದರಿಂದ ಆಗಾಗ ವಿದ್ಯುತ್ ವ್ಯತ್ಯಯ ಉಂಟಾಗುತ್ತಿದ್ದು ವಿದ್ಯುತ್ ಸರಬರಾಜು ನೀಡುವಲ್ಲಿ ವಿಳಂಬವಾಗುತ್ತಿರುವುದರಿಂದ ಹೆಚ್ಚುವರಿ ಡಿ.ಓ.ಎಲ್.ಓ. ಕಂಟ್ರೋಲ್ ಅಳವಡಿಸುವಂತೆ ಕೇಳಿರುತ್ತಾರೆ. ★ ಪೊನ್ನಂಪೇಟೆ ಹುದಿಕೇರಿ ಎಕ್ಸ್‌ಪ್ರೆಸ್ ಫೀಡರ್ ಚಾಲನೆ ಗೊಳಿಸುವಂತೆ ಹಲವಾರು ಬಾರಿ ಕೇಳಿಕೊಂಡಿದ್ದರೂ ಈ ವರೆಗೂ ಚಾಲನೆ ಗೊಳಿಸಿರುವುದಿಲ್ಲ ಆದರಿಂದ ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಕೂಡಲೆ ಸ್ಥಳ ಪರಿಶೀಲನೆ ಮಾಡಿ ಅಗತ್ಯವಿರುವ ಕಡೆ ಡಿ.ಓ.ಎಲ್.ಓ. ಗಳನ್ನು ಅಳವಡಿಸಲು ಸ.ಕಾ.ನಿ.ಇಂ(ವಿ), ರವರಿಗೆ ಸೂಚಿಸಿದರು. ★ ಪೊನ್ನಂಪೇಟೆ ಹುದಿಕೇರಿ ಎಕ್ಸ್‌ಪ್ರೆಸ್ ಫೀಡರ್ ಅದಷ್ಟು ಬೇಗನೆ ಚಾಲನೆಗೊಳಿಸಲು ಅಧೀಕ್ಷಕ ಇಂಜಿನಿಯರ್(ವಿ), ರವರು ಸ.ಕಾ.ನಿ.ಇಂ(ವಿ), ರವರಿಗೆ ಸೂಚಿಸಿದರು. |

Scanned by CamScanner

| | | | |
|---|---|---|---|
| | | ಕೋರಿರುತ್ತಾರೆ.<br><br>★ ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಿ ಓಲ್ಟೇಜ್ ಸಮಸ್ಯೆಯನ್ನು ಪರಿಹರಿಸಲು ಕೋರಿರುತ್ತಾರೆ.<br><br>★ ೩ ರಿಂದ ೫ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ನಿಯಮಿತ ಅವಧಿಯಲ್ಲಿ ಗ್ರಾಹಕರ ಕುಂದು ಕೊರತೆ ನಿವಾರಣಾ ಸಭೆಯನ್ನು ನಡೆಸುವಂತೆ ಸಲಹೆ ನೀಡಿದರು. | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಓಲ್ಟೇಜ್ ಸಮಸ್ಯೆಯನ್ನು ಸರಿಪಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸಲು ಸ.ಕಾ.ನಿ.ಇಂ(ವಿ), ರವರಿಗೆ ಸೂಚಿಸಿದರು.<br><br>★೩ ರಿಂದ ೫ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ನಿಯಮಿತ ಅವಧಿಯಲ್ಲಿ ಗ್ರಾಹಕರ ಕುಂದು ಕೊರತೆ ನಿವಾರಣಾ ಸಭೆಯನ್ನು ನಡೆಸುವಂತೆ ಅಧೀಕ್ಷ ಇಂಜಿನಿಯರ್(ವಿ), ರವರು ಸ.ಕಾ.ನಿ.ಇಂ(ವಿ), ರವರಿಗೆ ಸೂಚಿಸಿದರು. |
| ೨ | ಎಂ. ಎಸ್. ಕರುಂಬಯ್ಯ, ಕೋತೂರು ಗ್ರಾಮ. (ಲಕ್ಕುಂದ) | ★ ಇವರ ತೋಟದಲ್ಲಿ ಅಳವಡಿಸಿರುವ ಕಬ್ಬಿಣದ ಕಂಬವು ಬೀಳುವ ಸ್ಥಿತಿಯಲ್ಲಿದ್ದು 11 ಕೆ. ವಿ. ತಂತಿಯು 9 ರಿಂದ 10 ಅಡಿ ಕೆಳಗೆ ಬಾಗಿದ್ದು ತೋಟದ ಕಾಫಿ ಗಿಡದ ಮೇಲೆ ತಾಗುವಂತೆ ಇರುತ್ತದೆ. ಮತ್ತು ಅದೇ ಮಾರ್ಗದಲ್ಲಿ ಕಾಡಾನೆಗಳು ಸಂಚರಿಸುವುದರಿಂದ ಪ್ರಾಣಾಪಾಯ ಉಂಟಾಗುವ ಸ್ಥಿತಿಯಲ್ಲಿರುವುದರಿಂದ ಕೂಡಲೇ ಕ್ರಮ ಕೈಗೊಳ್ಳುವಂತೆ ಹಾಗೂ ಹೊಸ ಕಂಬಗಳನ್ನು ಅಳವಡಿಸುವಂತೆ ಕೋರಿರುತ್ತಾರೆ. | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಎಂ. ಎಸ್. ಕರುಂಬಯ್ಯ ರವರ ತೋಟದಲ್ಲಿ ಹಾಲಿ ಕಬ್ಬಿಣದ ಕಂಬವನ್ನು ಬದಲಿಸಿ ಹೊಸ ಪಿ.ಎಸ್.ಸಿ. ಕಂಬವನ್ನು ಅಳವಡಿಸುವಂತೆಯೂ ತೀರಾ ಕೆಳಮಟ್ಟದಲ್ಲಿರುವ ಮಾರ್ಗಕ್ಕೆ ಮಧ್ಯಂತರ ಕಂಬಗಳನ್ನು ಅಳವಡಿಸಲು ಸ.ಕಾ.ನಿ.ಇಂ(ವಿ) ರವರಿಗೆ ಸೂಚಿಸಿದರು. |
| ೩ | ಅಜ್ಜಿಕುಟ್ಟಿರ ಎಂ. ಸೋಮಯ್ಯ ಮತ್ತು ಇತರರು, ಕೋಣಂಗೇರಿ ಗ್ರಾಮ. (8277021122) | ★ ಕಳೆದ ಏಪ್ರಿಲ್ ಮೇ ತಿಂಗಳ ಗಾಳಿ ಮಳೆಗೆ ಅಜ್ಜಿಕುಟ್ಟಿರ ಮಾದಪ್ಪ ರವರ ಮನೆಯಿಂದ ಹಾದು ಹೋಗುವ ವಿದ್ಯುತ್ ಮಾರ್ಗದಲ್ಲಿ ಒಂದು ಕಂಬವು ಮುರಿದು ಹೋಗಿರುತ್ತದೆ. ಆದ್ದರಿಂದ ಈ ಕಂಬವನ್ನು ಬದಲಾಯಿಸಿ ಕೊಡುವಂತೆ ಕೋರಿರುತ್ತಾರೆ. | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಮುರಿದಿರುವ ಕಂಬವನ್ನು ಕೂಡಲೆ ಬದಲಾಯಿಸಲು ಸ.ಕಾ.ನಿ.ಇಂ(ವಿ) ರವರಿಗೆ ಸೂಚಿಸಿದರು. |
| ೪ | ಶ್ರೀ ಟಿ. ಟಿ. ಅಯ್ಯಪ್ಪ, (9449982854) ಶ್ರೀ ಹೆಚ್. ಎಂ. ಉತ್ತಪ್ಪ (9741524867) ಶ್ರೀ ಹೆಚ್.ವೈ. ರಾಮಕೃಷ್ಣ (9480308991) ಮತ್ತು ಕುಟ್ಟ ಗ್ರಾಮಸ್ಥರು. | ★ ಕುಟ್ಟ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ 200ರಷ್ಟು ಪರಿವರ್ತಕಗಳು ಇದ್ದು ಇವುಗಳನ್ನು ನಿರ್ವಹಿಸಲು ಒಬ್ಬ ಪವರ್ ಮ್ಯಾನ್ ಮಾತ್ರ ಇದ್ದು ಒಬ್ಬರಿಂದ ಇವುಗಳನ್ನು ನಿರ್ವಹಿಸಲು ಅಸಾಧ್ಯವಾಗಿದ್ದು ಆಗಾಗ್ಗೆ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗುತ್ತಿದ್ದು ಸರಿಪಡಿಸಲು ತುಂಬಾ ವಿಳಂಬವಾಗುತ್ತಿರುವುದರಿಂದ ಕುಟ್ಟ ವ್ಯಾಪ್ತಿಗೆ 4 ಜನ ಪವರ್ ಮ್ಯಾನ್ ಗಳನ್ನು ನೇಮಕ ಮಾಡುವಂತೆ ಮತ್ತು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಗುರುಪ್ರಸಾದ್ | ★ ಕುಟ್ಟ ಗ್ರಾಮಸ್ಥರ ಮನವಿಯನ್ನು ಆಲಿಸಿದ ಅಧೀಕ್ಷಕ ಇಂಜಿನಿಯರ್(ವಿ), ರವರು ಶಾಖಾ ಕಛೇರಿಯಲ್ಲಿರುವ ಪವರ್ ಮ್ಯಾನ್ ಗಳನ್ನು ಕುಟ್ಟ ಗ್ರಾಮಕ್ಕೆ ಹೆಚ್ಚುವರಿಯಾಗಿ ನಿಯೋಜಿಸಲು ಶಾಖಾಧಿಕಾರಿ ಶ್ರೀಮಂಗಲ ರವರಿಗೆ ಸೂಚಿಸಿದರು. ಹಾಗೂ ಗುರು ಪ್ರಸಾಧ್ ಪವರ್ ಮ್ಯಾನ್ ರವರನ್ನು ಶಾಖಾ ಕಛೇರಿ ವ್ಯಾಪ್ತಿಯಲ್ಲಿಯೇ ಬದಲಾವಣೆ ಮಾಡಲು ಸ.ಕಾ.ನಿ.ಇಂ(ವಿ) |

Scanned by CamScanner

| | | | |
|---|---|---|---|
| | | ರವರನ್ನು ಬದಲಾಯಿಸಿ ಸೂಕ್ತ ಪವರ್ ಮ್ಯಾನ್ ಗಳನ್ನು ನಿಯೋಜಿಸುವಂತೆ ಕೋರಿರುತ್ತಾರೆ. | ರವರಿಗೆ ಸೂಚಿಸಿದರು. |
| 5 | ಶ್ರೀ ಕೃಷ್ಣ ಕೊಡವ ಸ್ವಸಹಾಯ ಸಂಘ(ರಿ), ನಾಲ್ಕೇರಿ ಗ್ರಾಮ. (9440582566) | ★ ನಾಲ್ಕೇರಿ ಕ್ಯಾಂಪ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಾರ್ಗದಾಳು ಶ್ರೀ ಕೃಷ್ಣ ರವರು ಕ್ಯಾಂಪ್‌ನಲ್ಲಿ ವಾಸವಿರದೇ ಪ್ರತಿ ದಿನ ಗೋಣಿಕೊಪ್ಪಲುವಿನಿಂದ ಕರ್ತವ್ಯಕ್ಕೆ ಹಾಜರಾಗುತ್ತಿದ್ದು ಸೂಕ್ತ ಸಮಯದಲ್ಲಿ ಲಭ್ಯ ವಿರದೇ ವಿದ್ಯುತ್ ಅಡಚಣೆಗಳನ್ನು ನಿವಾರಿಸಲು ತೊಂದರೆಯಾಗಿರುತ್ತದೆ. ಮತ್ತು ದಾರಿಯಲ್ಲಿ ಸಿಗುವ ಡಿ.ಓ.ಎಲ್.ಓ ಮತ್ತು ಜಂಫ್ ಗಳನ್ನು ತೆಗೆದು ವಿದ್ಯುತ್ ಸರಬರಾಜುನಲ್ಲಿ ತೊಂದರೆಯನ್ನುಂಟು ಮಾಡುತ್ತಿದ್ದಾರೆ ಆದ್ದರಿಂದ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಅಥವಾ ಬೇರೆ ಕಡೆಗೆ ವರ್ಗಾವಣೆ ಮಾಡುವಂತೆ ಕೋರಿರುತ್ತಾರೆ. | ★ ಅಧೀಕ್ಷಕ ಇಂಜಿನಿಯರ್(ವಿ), ರವರು ನಾಲ್ಕೇರಿ ಗ್ರಾಮದ ಗ್ರಾಹಕರ ಜೊತೆ ಮಾತನಾಡಿ ಪವರ್ ಮ್ಯಾನ್ ಶ್ರೀ ಕೃಷ್ಣ ರವರನ್ನು ಕೇಂದ್ರ ಸ್ಥಾನದಲ್ಲಿ ವಾಸ್ತವ್ಯ ಹೂಡಲು ಸ.ಕಾ.ನಿ.ಇಂ(ವಿ), ರವರಿಗೆ ಸೂಚಿಸಿದರು. ಅನಾವಶ್ಯಕವಾಗಿ ಡಿ.ಓ.ಎಲ್.ಓ ಮತ್ತು ಜಂಫ್ ಗಳನ್ನು ತೆಗೆದು ಗ್ರಾಹಕರಿಗೆ ವಿದ್ಯುತ್ ಅಡಚಣೆ ಯಾಗದಂತೆ ಕಾರ್ಯ ನಿರ್ವಹಿಸಲು ಶಾಖಾದಿಕಾರಿ ಯವರಿಗೆ ಸೂಚಿಸಿದರು. ಹಾಗೂ ಪವರ್ ಮ್ಯಾನ್ ರವರನ್ನು ಶಾಖಾ ವ್ಯಾಪ್ತಿಯಲ್ಲಯೇ ಬದಲಾಯಿಸಲು ಸೂಚಿಸಿದರು. |
| 6 | ತೀತಮಡ ಎಂ. ಕುಶಾಲಪ್ಪ, ಈಚೂರು ಗ್ರಾಮ. (9480730637) | ★ ಈಚೂರು ಗ್ರಾಮದಲ್ಲಿ ಅಳವಡಿಸಿರುವ ಕಂಬಗಳು ಸುಮಾರು 35 ವರ್ಷಗಳು ಹಳೇಯದಾಗಿದ್ದು ಶಿಥಿಲಾವಸ್ಥೆಗೆ ಬಂದು ಕೆಲವು ಕಂಬಗಳು ಮುರಿದು ಬೀಳುವ ಸ್ಥಿತಿಯಲ್ಲಿದ್ದು ಸರಿಪಡಿಸುವಂತೆ ಹಲವಾರು ಬಾರಿ ಲಿಖಿತ ಅರ್ಜಿ ಸಲ್ಲಿಸಿದ್ದರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕೋರಿದರು. | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಶಿಥಿಲಗೊಂಡಿರುವ ಹಳೇ ಕಂಬಗಳನ್ನು ಬದಲಾಯಿಸಲು ಶಾಖಾಧಿಕಾರಿ ಗೋಣಿಕೊಪಲು ರವರಿಗೆ ಸೂಚಿಸಿದರು. |
| | | ★ ಕೇಂದ್ರ ಸರ್ಕಾರದ ಐ.ಪಿ.ಡಿ.ಎಸ್.ಯೋಜನೆಯ ಪ್ರಕಾರ ಹಳೆಯ ಕಂಬಗಳನ್ನು ಬದಲಿಸುವ ಯೋಜನೆ ಜಾರಿಗೆ ಬಂದಿದೆ ಆದರೆ ಅನೇಕ ಕಡೆಗಳಲ್ಲಿ ಕಂಬಗಳ ಬದಲಾವಣೆ ಯಾಗಿರುವುದಲ್ಲ ಆದರಿಂದ ಕಂಬಗಳನ್ನು ಬದಲಾಯಿಸಲು ಕೋರಿರುತ್ತಾರೆ. | ★ ಐ.ಪಿ.ಡಿ.ಎಸ್.ಯೋಜನೆಯು ಗೋಣಿಕೊಪ್ಪಲು ಉಪ-ವಿಭಾಗದಲ್ಲಿ ಜಾರಿಯಾಗಿರುವುದಿಲ್ಲ.ಆದರೂ ಸಹ ಶಿಥಿಲಗೊಂಡ ಹಳೇಯ ಕಂಬಗಳನ್ನು ಬದಲಾಯಿಸಲು ಶಾಖಾಧಿಕಾರಿಗಳಿಗೆ ಸೂಚಿಸಿದರು. |
| | | ★ಹಾಲಿ ಇರುವ ವಿದ್ಯುತ್ ಕಂಬಗಳ ಅಂತರವು 150-200 ಮೀಟರ್‌ಇರುವುದರಿಂದ ಅದಕ್ಕೆ ಅಳವಡಿಸಿದ ತಂತಿಗಳು ಜೋತುಬಿದ್ದು ಕೈಗೆ ಎಟುಕುವ ರೀತಿಯಲ್ಲಿರುವದರಿಂದ ಇದನ್ನು ಸರಿಪಡಿಸಿ ಕೊಡಲು ಕೋರಿದರು. | ★ 150-200 ಮೀಟರ್ ಅಂತರವಿರು ಮಾರ್ಗಗಳಿಗೆ ಮಧ್ಯಂತರ ಕಂಬಗಳನ್ನು ಅಳವಡಿಸಲು ಶಾಖಾಧಿಕಾರಿ ಯವರಿಗೆ ಸೂಚಿಸಿದರು. |
| | | ★ ವಿದ್ಯುತ್ ಸರಬರಾಜಿನಲ್ಲಿ ಅಡಚಣೆಯಾದಾಗ ದೂರವಾಣಿ ಕರೆ ಮಾಡಿದರೆ ಸಂಬಂಧಿಸಿದ ನೌಕರರು ದೂರವಾಣಿ ಕರೆಗೆ ಸ್ಪಂದಿಸುವುದಿಲ್ಲ ಎಂದು ತಿಳಿಸಿದರು. | ★ಯಾವುದೇ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾದರೆ ಗ್ರಾಹಕರ ದೂರವಾಣಿ ಕರೆಗಳಿಗೆ ನೌಕರರು ಹಾಗೂ ಅಧಿಕಾರಿಗಳು ಕೂಡಲೇ ಸ್ಪಂದಿಸಬೇಕೆಂದು ಅಧೀಕ್ಷ ಇಂಜಿನಿಯರ್(ವಿ), ರವರು |

Scanned by CamScanner

| | | | |
|---|---|---|---|
| | | ★ ಮಾಪಕ ಓದುಗರು ಮಾಪಕ ಓದಲು ನಿಯಮಿತವಾಗಿ ಬರುವುದಿಲ್ಲ ಬಂದರೂ ಮುಖ್ಯ ರಸ್ತೆಯಲ್ಲಿರುವ ಮನೆಗಳಿಗೆ ಮಾತ್ರ ಬಿಲ್ಲು ನೀಡಿ ಬಳಬಾಗದಲ್ಲಿರುವ ಮನೆಗಳಿಗೆ ಬಿಲ್ಲು ನೀಡದೆ ಕಛೇರಿಗೆ Door Lock ಎಂದು ಸುಳ್ಳುಮಾಹಿತಿಯನ್ನು ನೀಡಿರುತ್ತಾರೆ ಎಂದು ತಿಳಿಸಿದರು.<br>★ ಈಚೂರು ಕುಂದಾ ಗ್ರಾಮದಲ್ಲಿ ಜಂಗಲ್ ಕಟ್ಟಿಂಗ್ ಮಾಡಿಕೊಡುವಂತೆ ತಿಳಿಸಿದರು.<br><br>★ ಕೆಲವು ಕಂಬಗಳಲ್ಲಿ ೩ ತಂತಿಗಳ ಬದಲಾಗಿ ೨ ತಂತಿಗಳು ಮಾತ್ರ ಇರುತ್ತದೆ. ಇದನ್ನು ಬದಲಾಯಿಸಿ ಕೊಡಲು ಕೋರಿದರು. | ಸೂಚಿಸಿದರು.<br><br>★ ಮಾಪಕ ಓದುಗರು ನಿಗದಿತ ದಿನಾಂಕದಂದು ವಿದ್ಯುತ್ ಬಿಲ್ಲುಗಳನ್ನು ಗ್ರಾಹಕರಿಗೆ ನೀಡುವಂತೆ ಹಿರಿಯ ಸಹಾಯಕ ರವರಿಗೆ ಸೂಚಿಸದರು.<br><br>★ಹೆಚ್.ಟಿ. ಮತ್ತು ಎಲ್. ಟಿ. ಮಾರ್ಗಗಳಿಗೆ ತಾಗುವ ಮರ ಗಿಡದ ಕೊಂಬೆಗಳನ್ನು ತೆರವು ಮಾಡಲು ಅಧೀಕ್ಷಕ ಇಂಜಿನಿಯರ್(ವಿ), ರವರು ಶಾಖಾದಿಕಾರಿ ಯವರಿಗೆ ಸೂಚಿಸಿದರು.<br><br>★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಸ್ಥಳ ಪರಿಶೀಲನೆ ಮಾಡಿ ೩ ತಂತಿಗಳ ಬದಲಾಗಿ ೨ ತಂತಿಗಳ ಇರುತ್ತದೆ ಎಂಬುದನ್ನು ಮನಗಂಡು ನ್ಯೂನತೆಗಳನ್ನು ಸರಿಪಡಿಸಲು ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 7 | ಶ್ರೀ ಎ. ಸಿ. ಪೊನ್ನಪ್ಪ, ಪರಕಟಗೇರಿ ಗ್ರಾಮ (8277014444).<br><br>ಶ್ರೀ ಎ. ಸಿ. ಕುಟ್ಟಪ್ಪ, ಪರಕಟಗೇರಿ ಗ್ರಾಮ. | ★ ಸದರಿಯವರ ಬಾವಿಯ ಪಕ್ಕದಲ್ಲಿ ವಿದ್ಯುತ್ ಕಂಬವಿದ್ದು ಅದರಿಂದ ಮನೆಯ ಅಂಗಳದ ಮಧ್ಯದಲ್ಲಿ 11 ಕೆ. ವಿ. ಲೈನ್ ಹಾದು ಹೋಗಿದ್ದು ಅಪಾಯಕಾರಿ ಯಾಗಿರುವುದರಿಂದ ಕಂಬ ಮತ್ತು ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸುವಂತೆ ಕೋರಿರುತ್ತಾರೆ.<br>★ ತೋಟದ ಮಧ್ಯದಲ್ಲಿ 11 ಕೆ. ವಿ. ಲೈನ್ ಹಾದು ಹೋಗಿರುವುದರಿಂದ ಕಂಬಗಳನ್ನು ಬದಲಾಯಿಸಿ ಕೊಡಲು ಕೋರಿದರು. | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಬಾವಿಯ ಪಕ್ಕದಲ್ಲಿರುವ 11 ಕೆ. ವಿ. ವಿದ್ಯುತ್ ಕಂಬ ಮತ್ತು ತೋಟದ ಮಧ್ಯದಲ್ಲಿ ಹಾದು ಹೋಗಿರುವ ಕಂಬವನ್ನು ಹಾಗೂ ಮಾರ್ಗವನ್ನು ನಿಗಮದ ನಿಯಮಾನುಸಾರ ಸ್ಥಳಾಂತರಿಸಲು ಸ.ಕಾ.ನಿ.ಇಂ(ವಿ) ರವರಿಗೆ ಸೂಚಿಸಿದರು. |
| 8 | 23ಜನ ಗ್ರಾಮಸ್ಥರು, ಬೆಕ್ಕೆಸೊಡ್ಲೂರು ಗ್ರಾಮ. (9448791524(ಬೋಸ್)) (9480730890)(ಉತ್ತಪ್ಪ) | ★ ಸದರಿ ಗ್ರಾಮಕ್ಕೆ ವಡ್ಡರಮಾಡು 25 ಕೆ. ವಿ.ಎ. ಪರಿವರ್ತಕದಿಂದ ವಿದ್ಯುತ್ ಸರಬರಾಜಾಗುತ್ತಿದ್ದು ಅದನ್ನು ಬದಲಾಯಿಸಿ ಸದರಿ ಗ್ರಾಮದಲ್ಲಿ ಇರುವ 11 ಕೆ. ವಿ. ಮಾರ್ಗದ ಮುಖಾಂತರ ವಿದ್ಯುತ್ ಸರಬರಾಜನ್ನು ನೀಡುವಂತೆ ಕೋರಿರುತ್ತಾರೆ. | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಹಾಲಿ ಇರುವ 25 ಕೆ.ವಿ.ಎ ವಡ್ಡರಮಾಡು ಗ್ರಾಮದಿಂದ ಆಗುತ್ತಿರುವ ವಿದ್ಯುತ್ ಸರಬರಾಜನ್ನು ಬದಲಾಯಿಸಿ ಹಾಲಿ ಬೆಕ್ಕೆಸೊಡ್ಲೂರು 11 ಕೆ.ವಿ. ವಿದ್ಯುತ್ ಮಾರ್ಗದಿಂದ ಸರಬರಾಜು ನೀಡಿ ವಿದ್ಯುತ್ ಅಡಚಣೆಯನ್ನು ತಪ್ಪಿಸಬೇಕೆಂದು ಸ.ಕಾ.ನಿ.ಇಂ(ವಿ) ರವರಿಗೆ ಸೂಚಿಸಿದರು. |
| 9 | ಗ್ರಾಮಸ್ಥರು, ಬಾಳೆಲೆ, ದೇವನೂರು, ನಿಟ್ಟೂರು, ಕಾರ್ಮಾಡು, | ★ ಬಾಳೆಲೆ ಶಾಖೆಯ ಶಾಖಾಧಿಕಾರಿಯಾದ ಶ್ರೀ ಕೆ. ವಿ. ಸೋಮೇಶ್ ರವರು ಗ್ರಾಮಸ್ಥರ ದೂರುಗಳಿಗೆ ಸರಿಯಾಗಿ ಸ್ಪಂದಿಸದೇ | ★ಗ್ರಾಮಸ್ಥರ ಮನವಿಯನ್ನು ಆಲಿಸಿದ ಅಧೀಕ್ಷಕ ಇಂಜಿನಿಯರ್(ವಿ), ರವರು ಶಾಖಾಧಿಕಾರಿಯಾದ ಶ್ರೀ ಕೆ. ವಿ. |

Scanned by CamScanner

| | | | |
|---|---|---|---|
| | ಮಲ್ಲೂರು, ಕೊಟ್ಟಗೇರಿ, ಸುಳುಗೋಡು, ಪೊನ್ನಪ್ಪಸಂತೆ. | ಬೇಕಾಬಿಟ್ಟಿ ವರ್ತಿಸುತ್ತಿದ್ದು ಗ್ರಾಹಕರು ದೂರು ನೀಡಲು ಹೋದರೆ ಪೋಲೀಸ್ ಕಂಪ್ಲೇಟ್ ನೀಡುವುದಾಗಿ ಬೆದರಿಕೆ ಹಾಕುತ್ತಾರೆ ಆದ್ದರಿಂದ ಶಾಖಾಧಿಕಾರಿಯವರನ್ನು ಬಾಳೆಲೆ ಶಾಖೆಯಿಂದ ವರ್ಗಾವಣೆ ಮಾಡಿ ಬೇರೆ ಶಾಖಾಧಿಕಾರಿಯವರನ್ನು ನಿಯೋಜಿಸುವಂತೆ ಕೋರಿದರು. | ಸೋಮೇಶ್ ರವರನ್ನು ನಿಮ್ಮ ವಿಭಾಗೀಯ ಮಟ್ಟದಲ್ಲೆ ಬದಲಾವಣೆ ಮಾಡುವಂತೆ ಕಾ.ನಿ.ಇಂ(ವಿ), ಮಡಿಕೇರಿ ಹಾಗೂ ಸ.ಕಾ.ನಿ.ಇಂ(ವಿ), ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 10 | ಶ್ರೀ ನವೀನ್, ಹೈಸೊಡ್ಲೂರು ಗ್ರಾಮ. (9448647848) | ★ ಹೈಸೊಡ್ಲೂರು ಗ್ರಾಮದಲ್ಲಿ 2 ಕಬ್ಬಿಣದ ಕಂಬಗಳು ಮುರಿದು ಬೀಳುವ ಪರಿಸ್ಥಿತಿಯಲ್ಲಿದ್ದು ಅವುಗಳನ್ನು ತೆರವುಗೊಳಿಸಿ 2 ಸಿಮೆಂಟ್ ಕಂಬಗಳನ್ನು ಅಳವಡಿಸಲು ಕೋರಿರುತ್ತಾರೆ. | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಹೈಸೊಡ್ಲೂರು ಗ್ರಾಮದ 2 ಕಬ್ಬಿಣದ ಕಂಬಗಳು ಮುರಿದು ಬೀಳುವ ಸ್ಥಿತಿಯಲ್ಲಿರುವುದನ್ನು ಕೂಡಲೇ ಪಿ.ಎಸ್.ಸಿ. ಕಂಬಗಳಿಂದ ಬದಲಾಯಿಸುವಂತೆ ಸ.ಕಾ.ನಿ.ಇಂ(ವಿ), ರವರಿಗೆ ಸೂಚಿಸಲಾಯಿತು. |
| 11 | ಶ್ರೀ ಸೌರಭ್ ಹಾಗೂ ಇತರರರು,ಕುಟ್ಟ ಗ್ರಾಟ್ಟ ಗ್ರಾಮ. | ★ ಕೆ. ಎಂ. ಕೊಲ್ಲಿಯ ಬಿ.ಸಿ.ಬಾರ್ ನ ಹತ್ತಿರ ಇರುವ ಜಿ.ಓ.ಎಸ್. ಅನ್ನು ಸರಿಪಡಿಸಿ ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸುವಂತೆ ಮಾಡಬೇಕು ಎಂದು ಮನವಿ ಮಾಡಿರುತ್ತಾರೆ. | ★ ಕೆ. ಎಂ. ಕೊಲ್ಲಿಯ ಬಿ.ಸಿ.ಬಾರ್ ನ ಹತ್ತಿರ ಇರುವ ಜಿ.ಓ.ಎಸ್. ಅನ್ನು ಸರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸ.ಕಾ.ನಿ.ಇಂ(ವಿ), ರವರಿಗೆ ಅಧೀಕ್ಷಕ ಇಂಜಿನಿಯರ್(ವಿ), ರವರು ಸೂಚಿಸಿದರು. |
| 12 | ಶ್ರೀ ಎಸ್. ಎಸ್. ಸುರೇಶ್, ಮಾಯಿಮುಡಿ ಗ್ರಾಮ. (9448108091) | ★ ಮಠ ಟಿ.ಸಿ. 25ಕೆ.ವಿ.ಎ. ಇದ್ದು ಅದನ್ನು 63ಕೆ. ವಿ. ಎ ಗೆ ಮೇಲ್ದರ್ಜಿಸ ಬೇಕೆಂದು ಕೋರಿರುತ್ತಾರೆ. | ★ಮಾಯಿಮುಡಿ ಗ್ರಾಮಸ್ಥರ ಅರ್ಜಿಯನ್ನು ಪರಿಶೀಲಿಸಿದ ಅಧೀಕ್ಷಕ ಇಂಜಿನಿಯರ್(ವಿ), ರವರು ಕೂಡಲೇ 25 ಕೆ. ವಿ.ಎ. ಇಂದ 63 ಕೆ. ವಿ.ಎ. ಪರಿವರ್ತಕವನ್ನು ಅಳವಡಿಸಲು ಶಾಖಾಧಿಕಾರಿ ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 13 | ಗ್ರಾಮಸ್ಥರು, ಕೊಳತ್ತೋಡು ಬೈಗೋಡು ಗ್ರಾಮ. | ★ ತಿತಿಮತಿ ಮತ್ತು ಹಾತೂರು ಫೀಡರ್ ಗಳು ಒಂದೇ ಮಾರ್ಗದಲ್ಲಿ ಜೋಡಣೆಯಾಗಿರುತ್ತದೆ. ಈ ಎರಡು ಮಾರ್ಗಗಳನ್ನು ಬೇರ್ಪಡಿಸಿ ವಿದ್ಯುತ್ ಅಡಚಣೆಯನ್ನು ಸರಿಪಡಿಸಬೇಕೆಂದು ಕೋರಿರುತ್ತಾರೆ. | ★ ತಿತಿಮತಿ ಮತ್ತು ಹಾತೂರು ಫೀಡರ್ ಗಳು ಒಂದೇ ಮಾರ್ಗದಲ್ಲಿದ್ದು ಅವುಗಳನ್ನು ಪ್ರತ್ಯೇಕವಾಗಿ ಬೇರ್ಪಡಿಸಬೇಕೆಂದು ಅವಕಾಶ ವಿದ್ದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), ರವರು ಶಾಖಾಧಿಕಾರಿ ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 14 | ಶ್ರೀ ಬಿ. ಯು. ದೇವೇಂದ್ರ, ಕಳ್ಳಾಡು ಗ್ರಾಮ. (9448448778) | ★ ಸದರಿಯವರ ತೋಟದಲ್ಲಿ 11 ಕೆ. ವಿ. ಮಾರ್ಗವು ತೀರಾ ಕೆಳಮಟ್ಟದಲ್ಲಿರುತ್ತದೆ. ಅದಕ್ಕೆ ಮಧ್ಯಂತರ ಕಂಭಗಳನ್ನು ಅಳವಡಿಸಿ ಸರಿಪಡಿಸಿ ಕೊಡಬೇಕೆಂದು ಕೋರಿರುತ್ತಾರೆ. | ★ ಅಧೀಕ್ಷಕ ಇಂಜಿನಿಯರ್(ವಿ), ರವರು ಮಾತನಾಡಿ ಸದರಿಯವರ ತೋಟದಲ್ಲಿ 11 ಕೆ. ವಿ. ಮಾರ್ಗವು ತೀರಾ ಕೆಳಮಟ್ಟದಲ್ಲಿರುವುದನ್ನು ಸ್ಥಳ ಪರಿಶೀಲನೆ ಮಾಡಿ ಮಧ್ಯಂತರ ಕಂಬಗಳನ್ನು ಅಳವಡಿಸಲು ಶಾಖಾಧಿಕಾರಿ ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 15 | ಶ್ರೀ ಕೆ. ಪಿ. ಸುಬ್ಬಯ್ಯ, | ★ ಕಲ್ಲುಕೋರೆ ಕೋಳತೋಡುವಿನಲ್ಲಿ 11 | ★ತೀರಾ ಕೆಳಮಟ್ಟದಲ್ಲಿರುವ |

Scanned by CamScanner

| | | | |
|---|---|---|---|
| | ಕಲ್ಲುಕೋರೆ ಕೊಳತ್ತೋಡು ಗ್ರಾಮ. (8762237691) | ಕೆ. ವಿ. ಮಾರ್ಗವು ತೀರಾ ಕೆಳಮಟ್ಟದಲ್ಲಿ ಇರುತ್ತದೆ. ಅದನ್ನು ಸರಿಪಡಿಸಿ ಕೊಡಬೇಕೆಂದು ಮನವಿಯನ್ನು ಮಾಡಿರುತ್ತಾರೆ. | ಮಾರ್ಗಕ್ಕೆ ಮಧ್ಯಂತರ ಕಂಬಗಳನ್ನು ಅಳವಡಿಸಿವಂತೆ ಅಧೀಕ್ಷಕ ಇಂಜಿನಿಯರ್(ವಿ), ರವರು ಶಾಖಾಧಿಕಾರಿ ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 16 | ಶ್ರೀ ಕೆ. ಎ. ಉತ್ತಯ್ಯ, ಹೋಸೂರು ಗ್ರಾಮ. (9901239541) | ★ ಹೊಸೂರು ಮಹದೇಶ್ವರ ದೇವಸ್ಥಾನದ ಸುತ್ತ ಮುತ್ತ ಓಲ್ಟೇಜ್ ಸಮಸ್ಯೆ ಜಾಸ್ತಿ ಇರುವುದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸಬೇಕೆಂದು ಕೋರಿರುತ್ತಾರೆ. | ★ ಹೊಸೂರು ಮಹದೇಶ್ವರ ದೇವಸ್ಥಾನದ ಸುತ್ತ ಮುತ್ತ ಓಲ್ಟೇಜ್ ಸಮಸ್ಯೆ ಇರುವುದನ್ನು ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಬೇಕೆಂದು ಸ.ಕಾ.ನಿ.ಇಂ(ವಿ) ಹಾಗೂ ಶಾಖಾಧಿಕಾರಿ ಗೋಣಿಕೊಪ್ಪಲು ರವರಿಗೆ ಸೂಚಿಸಿದರು. |
| 17 | ಶ್ರೀ ಗೋಪಿ ಚಿಣ್ಣಪ್ಪ, ಅಧ್ಯಕ್ಷರು ಹೊಸೂರು ಗ್ರಾಮ ಪಂಚಾಯಿತಿ. | ★ ಪಂಚಾಯಿತಿಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿದ ನಂತರ ಕೆ. ಇ. ಬಿ. ವತಿಯಿಂದ ಬಿಲ್ ಸಿದ್ಧಪಡಿಸಲು ಎಸ್. ಆರ್. ರೇಟ್ ತುಂಬಾ ಕಡಿಮೆ ಇರುವುದರಿಂದ ಕಾಮಗಾರಿಯನ್ನು ಪೂರ್ಣಗೊಳಿಸಲು ಸಾಧ್ಯವಾಗದ ಕಾರಣ ಎಸ್ .ಆರ್. ರೇಟ್ ಅನ್ನು ಜಾಸ್ತಿ ಮಾಡಬೇಕೆಂದು ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಮೈಸೂರು ರವರಿಗೆ ಒತ್ತಾಯಿಸಲಾಯಿತು. | ★ ಎಸ್. ಆರ್. ರೇಟ್ ಕಡಿಮೆ ಇರುವುದನ್ನು ಜಾಸ್ತಿ ಮಾಡಲು ಪ್ರಸ್ತಾವನೆಯನ್ನು ಕಳುಹಿಸಿ ಕೊಡುವಂತೆ ಅಧೀಕ್ಷಕ ಇಂಜಿನಿಯರ್(ಟಿಇ), ರವರು ಕಾ.ನಿ.ಇಂ(ವಿ) ಮಡಿಕೇರಿ ರವರಿಗೆ ಸೂಚಿಸಿದರು. |

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

<u>ಪ್ರತಿಯನ್ನು:</u>

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಗೋಣಿಕೊಪ್ಪ ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.

Scanned by CamScanner